**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालयः**

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ: ಪ್ರ.ಸಂ.ಗ್ರಂ.ಪು./01/2015–16/2016–17 ದಿನಾಂಕ: 09.01.2017

<u>ಪ್ರಕಟಣೆಗಾಗಿ</u>

ಗೆ,

ಮಾನ್ಯ ಸಂಪಾದಕರು
------------
------------
------------

**'ಸಂಸ್ಕೃತ ಗ್ರಂಥ ಪುರಸ್ಕಾರ – 2015'**

ಕರ್ನಾಟಕ ರಾಜ್ಯದಲ್ಲಿ ಸಂಸ್ಕೃತ ಶಿಕ್ಷಣ ಮತ್ತು ಸಂಶೋಧನೆಗಳ ಬಲವರ್ಧನೆಗಾಗಿ ರಾಜ್ಯ ಸರ್ಕಾರವು 2010ರಲ್ಲಿ "ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ"ವನ್ನು ಸ್ಥಾಪಿಸಿದೆ. ವಿಶ್ವವಿದ್ಯಾಲಯವು ಪದವಿಗಳನ್ನು ನೀಡುವುದರ ಜೊತೆಗೆ ಸಂಸ್ಕೃತ ಭಾಷೆಯ ಪ್ರಸಾರ–ಅಭಿವೃದ್ಧಿಗಳ ದೃಷ್ಟಿಯಿಂದ ಹಲವು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಗ್ರಂಥಪುರಸ್ಕಾರ ಯೋಜನೆಯೂ ಒಂದು.

ಕರ್ನಾಟಕ ರಾಜ್ಯದಲ್ಲಿ ಸಂಸ್ಕೃತ ಸಾಹಿತ್ಯ ರಚನೆ/ಗ್ರಂಥರಚನೆ ಮತ್ತು ಪ್ರಕಾಶನದ ಉದ್ಯಮವು ಬಹಳ ದೀರ್ಘ ಇತಿಹಾಸವನ್ನು ಹೊಂದಿದೆ. ಇಂದಿಗೂ ಅನೇಕ ವಿದ್ವಾಂಸರು ಸಂಸ್ಕೃತ ವಾಙ್ಮಯದ ಗದ್ಯ, ಪದ್ಯ ಇತ್ಯಾದಿ ಪ್ರಕಾರಗಳ ರಚನೆಯಲ್ಲಿ ತೊಡಗಿದ್ದಾರೆ. ಅನೇಕ ಯುವಪ್ರತಿಭೆಗಳೂ ಇಂಥ ಗ್ರಂಥ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪ್ರತಿ ವರ್ಷ ಸಂಸ್ಕೃತ ವಾಙ್ಮಯ ಪ್ರಪಂಚಕ್ಕೆ ಕರ್ನಾಟಕ ರಾಜ್ಯದ ಗ್ರಂಥಕರ್ತೃಗಳ ಕೊಡುಗೆ ಗಣನೀಯವಾಗಿದೆ. ಇಂತಹ ಸೃಜನಶೀಲ ರಚನೆಗಳಿಗೆ ರಾಜ್ಯಮಟ್ಟದಲ್ಲಿ ಯಾವುದೇ ಪ್ರೋತ್ಸಾಹ ಪುರಸ್ಕಾರಗಳು ದೊರಕುತ್ತಿಲ್ಲ.

ಈ ಹಿನ್ನೇಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010–11ನೇ ಸಾಲಿನಿಂದ "ಗ್ರಂಥಪುರಸ್ಕಾರ ಯೋಜನೆ"ಯನ್ನು ಆರಂಭಿಸಿದೆ. ಕಳೆದ "ಐದು" ಸಾಲಿನಿಂದ ಸಮಕಾಲೀನ ಉತ್ತಮ ಸಂಸ್ಕೃತ ಗ್ರಂಥಗಳಿಗೆ ಪುರಸ್ಕಾರ ನೀಡುತ್ತಾ ಬಂದಿದೆ. ಈ ಪುರಸ್ಕಾರವು ಪ್ರಶಸ್ತಿ ಫಲಕ, ಶಾಲು ಮತ್ತು 10,000/–ರೂ.ಗಳೂ ಗೌರವಧನವನ್ನು ಒಳಗೊಂಡಿದೆ. ಪ್ರಸ್ತುತ 2015ನೇ ಸಾಲಿನ ಗ್ರಂಥಪುರಸ್ಕಾರಕ್ಕೆ ಅರ್ಹ ಗ್ರಂಥಗಳನ್ನು ಆಹ್ವಾನಿಸಲಾಗಿದೆ. ಲೇಖಕರು ತಮ್ಮ ಕೃತಿಗಳನ್ನು 2017 ಫೆಬ್ರವರಿ 28ರಳೊಗೆ ವಿಶ್ವವಿದ್ಯಾಲಯಕ್ಕೆ ಗ್ರಂಥಗಳನ್ನು ಕಳುಹಿಸಲು ಕೋರಿದೆ. ಕಳೆದ 2012ನೇ ಸಾಲಿನ ನಿಂದ "ಐದು" ವರ್ಷಗಳಲ್ಲಿ ಪ್ರಕಟವಾದ ಪುಸ್ತಕಗಳನ್ನು ಪುರಸ್ಕಾರಕ್ಕೆ ಪರಿಗಣಿಸಲಾಗುವುದು.

ವಿಶ್ವವಿದ್ಯಾಲಯ ಅಂತರ್ಜಾಲತಾಣ www.ksu.ac.inನಲ್ಲಿ ಸಂಸ್ಕೃತ ಗ್ರಂಥ ಪುರಸ್ಕಾರ ಯೋಜನೆಯ ಸಂಪೂರ್ಣ ವಿವರ ಲಭ್ಯವಿದೆ.

**ಪುರಸ್ಕಾರಕ್ಕೆ ಅರ್ಹವಾದ ವಾಙ್ಮಯ ಪ್ರಕಾರಗಳು**

1. ಕಾದಂಬರೀ/ಕಥಾ ಸಾಹಿತ್ಯ.
2. ಗದ್ಯ/ಪದ್ಯ/ಕಾವ್ಯ. ನಾಟಕ ಸಾಹಿತ್ಯ.
3. ಗ್ರಂಥ ಸಂಪಾದನಾ ಸಾಹಿತ್ಯ.
4. ಪ್ರಬಂಧ ವಿಮರ್ಶನ ಸಾಹಿತ್ಯ/ವಿಜ್ಞಾನ ಸಾಹಿತ್ಯ.
5. ಇತರ ಭಾಷೆಗಳಿಂದ ಸಂಸ್ಕೃತಕ್ಕೆ ಅನುವಾದ.
6. ಶಾಸ್ತ್ರೀಯ ಗ್ರಂಥದ ಕನ್ನಡ ಅನುವಾದ.
7. ಸಂಸ್ಕೃತದ ಅತ್ಯುತ್ತಮ ಸಂಶೋಧನಾ ಪ್ರಬಂಧ (ಪಿಹೆಚ್‌ಡಿ) ವಿದ್ಯಾವಾರಿಧಿ.

O/C

8. ಅತ್ಯುತ್ತಮ ಇಂಡಾಲಜಿ ವಿಮರ್ಶ ಗ್ರಂಥ ಅಥವಾ ಲೇಖನ ಸಂಗ್ರಹ.
9. ಸಂಶೋಧನಾ ವಿದ್ಯಾರ್ಥಿಗಳ ಅತ್ಯುತ್ತಮ ಸಂಶೋಧನ ಲೇಖನ (ಸುದೀರ್ಘ–ಕನಿಷ್ಠ 50 ಪುಟಗಳು).
10. ಶಿಕ್ಷಕರ ಅತ್ಯುತ್ತಮ ಸಂಶೋಧನಾ ಲೇಖನ (80–100 ಪುಟಗಳು).

ಈ ಅರ್ಹ ಗ್ರಂಥಗಳನ್ನು ವಿದ್ವಾಂಸರು ಅಥವಾ ಯಾವುದೇ ಸಂಸ್ಥೆಯ ಪದಾಧಿಕಾರಿಗಳು ನಾಮ ನಿರ್ದೇಶನ ಮಾಡಿ ಗ್ರಂಥದ ಮೂರು ಪ್ರತಿಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸುವುದು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

1. ಡಾ. ಸಂತೋಷ ಹಾನಗಲ್, ಉಪನಿರ್ದೇಶಕರು ಪ್ರಸಾರಾಂಗ, ಕಸಂವಿ, ಬೆಂ–18. ಮೊಬೈಲ್ ನಂ: 09535725499.
2. ಡಾ. ಬಿ. ಗೋವಿಂದ ಸಹಾಯಕ ನಿರ್ದೇಶಕರು ಪ್ರಸಾರಾಂಗ, ಕಸಂವಿ, ಬೆಂ–18. ಮೊಬೈಲ್ ನಂ: 09632079891

ಇ–ಮೇಲ್: karnatakasankrituniversity@gmail.com

ದೂರವಾಣಿ ಸಂಖ್ಯೆ: 080–26701303, 26705387

ಈ ಯೋಜನೆಯ ವಿವರಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಈ ಮೂಲಕ ಕೋರುತ್ತೇನೆ.

Sulpan

**ಕುಲಸಚಿವರು**